# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಪುನ/ಪಿಆರ್/263 /2018-19 ದಿನಾಂಕ: 05-01-2019

**ದಿನಾಂಕ:- 05-01-2019 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

**ಸಭೆಗೆ ಹಾಜರಿದ್ದವರು:-**

1. ಬಿ.ಬಿ.ಎಂ.ಪಿ ವಾರ್ಡ್ ಸಂಖ್ಯೆ:78 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ.ಎ.ಆರ್.ಜಾಕೀರ್ ರವರು.
2. ಸಹಾಯಕ ಅಭಿಯಂತರರು, ವಾರ್ಡ್ ನಂ.78 ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀಮತಿ.ಸಾವಿತ್ರಿ.
3. ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
4. ಸಹಾಯಕ ಕಂದಾಯ ಅಧಿಕಾರಿಗಳು (ಪುಲಿಕೇಶಿನಗರ) ರವರು.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ವಿಭಾಗ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಿಕೇಶಿನಗರ ಉಪವಿಭಾಗ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು /ವಿದ್ಯುತ್ /ಸ್ಟ್ರೀಟ್ ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು.

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ಅಧ್ಯಕ್ಷರಾದ ಶ್ರೀ.ಎ.ಆರ್.ಜಾಕೀರ್ ರವರು ಪಾಲಿಕೆಯ ವಾರ್ಡ್ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ವಾರ್ಡ್ ವ್ಯಾಪ್ತಿಯಲ್ಲಿ ಹಾಕಲಾಗಿರುವ Hoardings ಗಳು ಅಧಿಕೃತವಾಗಿ ಹಾಕಲಾಗಿರುತ್ತದೆ ಹಾಗೂ ಸದರಿ Hoardings ಗಳ ಅಳತೆಗಳನ್ನು ಬೋರ್ಡ್ ನಿಂದ ಆರ್ಡರ್ ಬಂದ ನಂತರ ಪರಿಶೀಲಿಸಲಾಗುತ್ತದೆ ರಂದು ತಿಳಿಸಲಾಗಿರುತ್ತದೆ.
2. ಟೀ ಸ್ಟಾಲ್‌ಗಳ ಮೇಲೆ ಒಟ್ಟು ರೂ.10,000/- ಗಳ ದಂಢ ವಸೂಲಿ ಮಾಡಿರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.
3. ಹೋಟೆಲ್‌ಗಳ ಮುಂದೆ ಮರಗಳ ಸುತ್ತಲೂ ಹಾಕಿರುವ ಲೈಟ್ಸ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ಅಭಿಯಂತರರಿಗೆ ತಿಳಿಸಲಾಗಿರುತ್ತದೆ.
4. ವಾರ್ಡಿನಲ್ಲಿ ಇದೇ ದಿನ Fogging ಮಾಡಲು ಆರೋಗ್ಯ ವೈಧ್ಯಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
5. ಕೋಲ್ಸ್ ರಸ್ತೆ ಮತ್ತು ಪ್ರಾಮಿನೆಡ್ ರಸ್ತೆಯಲ್ಲಿರುವ ಬ್ಲಾಕ್‌ಸ್ಪಾಟ್‌ಗಳ ಹತ್ತಿರ ಗೋಡೆ ಬರಹಗಳನ್ನು ಬರೆಸಲು ತಿಳಿಸಲಾಯಿತ್ತು.
6. ಟೀ ಸ್ಟಾಲ್‌ಗಳಿಗೆ ಒಂದು ವಾರದೊಳಗೆ ನೋಟೀಸ್‌ನ್ನು ಜಾರಿಗೊಳಿಸಲು ಆರೋಗ್ಯ ವೈಧ್ಯಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
7. ವಾರ್ಡ್ ವ್ಯಾಪ್ತಿಯಲ್ಲಿರುವ ಹೋಟೇಲ್‌ಗಳನ್ನು ಪರಿಶೀಲಿಸಿ ಆಹಾರದ ಗುಣಮಟ್ಟದ ಬಗ್ಗೆ ವರದಿ ನೀಡಲು ಫುಡ್ ಇನ್ಸ್‌ಪೆಕ್ಟರ್‌ಗೆ ತಿಳಿಸಲಾಗಿರುತ್ತದೆ.

Scanned with CamScanner

8. ರಸ್ತೆಗಳಲ್ಲಿ, ಪಾರ್ಕಗಳಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಮತ್ತು ಹಸುಗಳನ್ನು ರಸ್ತೆಯಲ್ಲಿ ಬಿಡುತ್ತಿರುವುದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಪಶುಸಂಗೋಪನ ಇಲಾಖೆ ರವರಿಗೆ ನೋಟೀಸ್ ನೀಡಲು ಸೂಚಿಸಲಾಗಿರುತ್ತದೆ.

9. ಫ್ಲೆಕ್ಸ್ ಮತ್ತು ಬ್ಯಾನರ್ಸ್‌ಗಳನ್ನು ಮುದ್ರಿಸುತ್ತಿರುವ ಅಂಗಡಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಲಾಗಿರುತ್ತದೆ.

10. ನೇತಾಜಿ ರಸ್ತೆಯ ಪುಟ್‌ಪಾತ್ ಮೇಲೆ ಮತ್ತು ತಳ್ಳುವಗಾಡಿಗಳಿಂದ ವ್ಯಾಪರ ಮಾಡುತ್ತಿರುವವರಿಂದ ಪ್ಲಾಸ್ಟಿಕ್ ಕವರ್‌ಗಳನ್ನು ಜಪ್ತಿ ಮಾಡಿರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

11. Silt and Tractor ಕಾಮಗಾರಿಯ ಜಾಬ್ ಸಂಖ್ಯೆ ಆದ ನಂತರ ವಾರ್ಡ್ ವ್ಯಾಪ್ತಿಯಲ್ಲಿರುವ ಡೆಬ್ರೀಸ್ ಅನ್ನು ತೆರವುಗೊಳಿಸಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ.

12. ಕೋಲ್ಸ್ ಪಾರ್ಕಿನಲ್ಲಿ ಹೆಚ್ಚುವರಿಯಾಗಿ 10 ಕುಳಿತುಕೊಳ್ಳುವ ಆಸನಗಳನ್ನು ಹಾಕಲು ತಿಳಿಸಲಾಗಿರುತ್ತದೆ.

13. ಕೋಲ್ಸ್ ಪಾರ್ಕಿನ ಒಳಗಡೆ Cobbale Stone ಪಾದಚಾರಿ ಮಾರ್ಗವನ್ನು ಸರಿಪಡಿಸಲು ಸೂಚಿಸಲಾಯಿತ್ತು

14. ಮೂರು ತಿಂಗಳಿನಿಂದ Welfare Teachers ಗಳಿಗೆ ಸಂಬಳ ನೀಡದಿರುವುದರ ಬಗ್ಗೆ ತಿಳಿಸಲಾಗಿರುತ್ತದೆ.

15. ಮಾಸ್ಕ್ ರಸ್ತೆ ಮತ್ತು ನೇತಾಜಿ ರಸ್ತೆಯಲ್ಲಿ ಹೊಸದಾಗಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ತಿಳಿಸಲಾಗಿರುತ್ತದೆ.

16. ಸಿಂಧಿ ಕಾಲೋನಿ ಹತ್ತಿರ ಹೊಸದಾಗಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ತಿಳಿಸಲಾಗಿರುತ್ತದೆ.

17. ಕಲ್ಯಾಣ ಯೋಜನೆ ಅಡಿಯಲ್ಲಿ 32 ಫಲಾನುಭವಿಗಳಿಗೆ ಲ್ಯಾಪ್‌ಟಾಪ್, 4 ಜನ ಫಲಾನುಭವಿಗಳಿಗೆ ಆಟೋ ರೀಕ್ಷಾ ಮತ್ತು ಒಬ್ಬರಿಗೆ 2+2 ಚಕ್ರದ ವಾಹನ ನೀಡುವ ಬಗ್ಗೆ ಮಾನ್ಯ ಅಧ್ಯಕ್ಷರು ಹಾಗೂ ವಾರ್ಡ್ ಸದಸ್ಯರು ರವರಿಗೆ ಅರ್ಜಿಗಳು ಬಂದಿದ್ದು, ಸದರಿ ಅರ್ಜಿಗಳನ್ನು ವಾರ್ಡ್ ಕಮಿಟಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.

18. ಪಾದಚಾರಿ ಮಾರ್ಗಗಳ ಮೇಲೆ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವ ಬಗ್ಗೆ ಪೋಲೀಸ್ ಇಲಾಖೆ ರವರಿಗೆ ಪತ್ರ ಬರೆಯಲು ತಿಳಿಸಲಾಗಿರುತ್ತದೆ.

19. ಸೌಂಡರ್ಸ್ ರಸ್ತೆಯಲ್ಲಿರುವ Shop keepers ರವರು ಪಾದಚಾರಿ ಮಾರ್ಗದ ಮೇಲೆ ಹಾಕಿರುವ ವಸ್ತುಗಳನ್ನು ತೆರವುಗೊಳಿಸಲು ಸೂಚಿಸಲಾಗಿರುತ್ತದೆ.

20. ವಾರ್ಡ್ 78 ರ ಮಾಸ್ಕ್ ರಸ್ತೆಯನ್ನು ಶ್ರೀ.ವೀರಯ್ಯ ಎಂಬುವವರು ಸುಮಾರು ವರ್ಷಗಳಿಂದ ಪ್ರತಿನಿತ್ಯ ರಸ್ತೆ ಗುಡಿಸುತ್ತಿದ್ದು, ಸದರಿ ರವರನ್ನು ಬಯೋಮೆಟ್ರೀಕ್‌ನಲ್ಲಿ ಸೇರಿಸಿರುವುದಿಲ್ಲ. ಆದ್ದರಿಂದ ಇವರಿಗೆ ಬಯೋಮೆಟ್ರೀಕ್‌ನಲ್ಲಿ ಸೇರಿಸಲು ಕ್ರಮ ಕೈಗೊಳ್ಳಲು ತಿಳಿಸಲಾಗಿರುತ್ತದೆ.

21. ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ವಸೂಲಾತಿ ಮಾಡಲಾಗುತ್ತಿದ್ದು, ಶೇ.70 ರಷ್ಟು ವಸೂಲಾತಿ ಮಾಡಲಾಗಿರುತ್ತದೆ ಹಾಗೂ ದೊಡ್ಡ ಪ್ರಮಾಣದ ಕಂದಾಯ ಪಾವತಿ ಮಾಡದವರಿಗೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ ಎಂದು ಕಂದಾಯ ಮೌಲ್ಯ ಮಾಪಕರವರು ತಿಳಿಸಿರುತ್ತಾರೆ.

22. ಹೋಲಿಗೆ ಯಂತ್ರ ಕೇಂದ್ರದಲ್ಲಿ ವಿದ್ಯುತ್ ಸ್ವಿಚ್ ಬೋರ್ಡ್‌ಅನ್ನು ಸರಿಪಡಿಸಲು ತಿಳಿಸಲಾಗಿರುತ್ತದೆ.

23. ಕಮಿಟಿಯ ಎಲ್ಲಾ ಸದಸ್ಯರು ತಮ್ಮ ತಮ್ಮ ಏರಿಯಾದಲ್ಲಿ ತಪಾಸಣೆ ನಡೆಸಿ ಉಳಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.

Scanned with CamScanner

ನಂತರ ಮುಂದಿನ ಸಭೆಯೊಳಗೆ ಮೇಲ್ಕಂಡ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ಪಟ್ಟಿ ನೀಡಬೇಕೆಂದು ಎಲ್ಲಾ ಸದಸ್ಯರಿಗೆ ತಿಳಿಸಿ ಎಲ್ಲಾ ಕೆಲಸ ಕಾರ್ಯಗಳನ್ನು ಆಧ್ಯತೆ ನೀಡಿ ಮುಕ್ತಾಯಗೊಳಿಸಲು ಸೂಚಿಸುತ್ತಾ, ಮುಂದಿನ ಸಭೆಯನ್ನು ದಿನಾಂಕ: 02-02-2019 ರಂದು ನಿಗಧಿಪಡಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು

ಕಾರ್ಯದರ್ಶಿ

ಪ್ರತಿಯನ್ನು:

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿಯ ಸದಸ್ಯರು, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
6. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner